**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ 75/2023</u>

| | | |
|---|---|---|
| ಸಾಕ್ಷಿದಾರರ ಹೆಸರು | - ಜಯಮ್ಮ | ಪಿಡಬ್ಲೂ -1 |
| ಗಂಡನ ಹೆಸರು | - ರವಿ | ಸಿಡಬ್ಲೂ -1 |
| ವಯಸ್ಸು | - 44 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಸೀಕೆ, ಮುದುಗುಣಿ, ಬಾಳೆಹೊನ್ನೂರು | |

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ jitsi app ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 29.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು, ಆತ ನನ್ನ ಅಣ್ಣ. ಮೃತ ರವಿ ನನ್ನ ಗಂಡ. ಚಾಸಾ.5 ಮತ್ತು ಚಾಸಾ.6 ನನ್ನ ಮಕ್ಕಳು. ಚಾಸಾ.2 ರಿಂದ ಚಾಸಾ.4, ಚಾಸಾ.7 ರಿಂದ ಚಾಸಾ.9 ರವರು ಗೊತ್ತು.

2. ದಿನಾಂಕ 09.03.2023 ರ ಒಂದು ವಾರದ ಹಿಂದೆ ನನ್ನ ಅಣ್ಣನಾದ ಆರೋಪಿ ಸೀಕೆ ಮುದುಗುಣಿಯಲ್ಲಿರುವ ನಮ್ಮ ಮನೆಗೆ ಬಂದು ನಮ್ಮೊಂದಿಗೆ ವಾಸವಾಗಿದ್ದನು. ಈಗ ನನ್ನ ಮಗನಾದ ಚಾಸಾ.5 ಬೆಂಗಳೂರಿನಲ್ಲಿ ಕೆಲಸ

ಮಾಡಿಕೊಂಡಿದ್ದಾನೆ ಮತ್ತು ನನ್ನ ಮಗಳಾದ ಚಾಸಾ.6 ಮಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದಾಳೆ.

3. ಆರೋಪಿ ಮದ್ಯಪಾನವನ್ನು ಮಾಡುತ್ತಿದ್ದನು ಹಾಗಾಗಿ ಆ ವಿಚಾರಕ್ಕೆ ನನ್ನ ಗಂಡ ಮತ್ತು ಆರೋಪಿ ಜಗಳ ಮಾಡಿಕೊಳ್ಳುತ್ತಿದ್ದರು. ನನ್ನ ಅಣ್ಣ ಮನೆಯಲ್ಲಿಯೇ ಇರುತ್ತಿದ್ದ ಕಾರಣ ದಿನಾಂಕ 09.03.2023 ರಂದು ಸಂಜೆ ಸಮಯಕ್ಕೆ ನನ್ನ ಗಂಡ ಆತನನ್ನು ಕುರಿತು ಮನೆಯಲ್ಲಿಯೇ ಊಟ ಮಾಡಿಕೊಂಡು ಸುಮ್ಮನೇ ಕುಳಿತಿರುತ್ತೀಯಾ ಮನೆ ಬಿಟ್ಟು ಹೋಗು ಎಂದು ಬೈದರು. ಆಗ ನನ್ನ ಅಣ್ಣ ನಿನ್ನ ಗಂಡನಿಗೆ ಒಂದು ಗತಿ ಕಾಣಿಸುತ್ತೇನೆ ಎಂದು ನನ್ನ ಬಳಿ ಹೇಳಿದ್ದನು ಮತ್ತು ಮಾರನೇ ದಿನ ಮಧ್ಯಾಹ್ನದ ಮೇಲೆ ಮನೆಯನ್ನು ಬಿಟ್ಟು ಹೋಗುವುದಾಗಿ ಹೇಳಿದ್ದನು.

4. ದಿನಾಂಕ 10.03.2023 ರಂದು ಸಂಜೆ 4.15 ಗಂಟೆ ಸಮಯದಲ್ಲಿ ನನ್ನ ಗಂಡ ನಮ್ಮ ಮನೆಗೆ ಬಂದು ಆರೋಪಿಗೆ ಬೈದರು. ಆಗ ಆರೋಪಿ ನನ್ನ ಗಂಡನನ್ನು ನಮ್ಮ ಮನೆಯ ಮುಂದೆ ಇರುವ ನ.ರಾ.ಪುರ-ಶಿವಮೊಗ್ಗಕ್ಕೆ ಹೋಗುವ ರಸ್ತೆಯ ಹತ್ತಿರ ಕರೆದುಕೊಂಡು ಹೋಗಿ ಗುದ್ದಲಿಯಿಂದ ನನ್ನ ಗಂಡನ ಕುತ್ತಿಗೆಯ ಬಳಿ ಮತ್ತು ಮುಖವನ್ನು ಕೊಚ್ಚಿ ಹಾಕಿದನು. ಆಗ ನನ್ನ ಗಂಡ ಕೂಗಿಕೊಂಡನು. ಆ ಶಬ್ದವನ್ನು ಕೇಳಿ ನಾನು ಮನೆಯಿಂದ ಹೊರಗೆ ಬಂದು ನೋಡಿದಾಗ ನನ್ನ ಗಂಡ ಗಾಯಗೊಂಡು ಬಿದ್ದಿದ್ದನು. ಆರೋಪಿ ನನ್ನ ಗಂಡನನ್ನು ಕೊಚ್ಚಿ ಹಾಕಿ ರಸ್ತೆಯ ಬದಿಯಲ್ಲಿ ಬಸ್ಸನ್ನು ಹತ್ತಲು ನಿಂತಿದ್ದನು. ಆಗ ಊರಿನವರೆಲ್ಲರೂ ಸೇರಿ ಆರೋಪಿಯನ್ನು ಹಿಡಿದು

ನಿಲ್ಲಿಸಿದರು. ನನ್ನ ಗಂಡನಿಗೆ ಗಾಯವಾಗಿ ರಕ್ತ ಬಂದಿತ್ತು. ಕೂಡಲೇ ಊರಿನವರು ಫೋನ್ ಮಾಡಿ ಆ್ಯಂಬುಲೆನ್ಸನ್ನು ಕರೆಸಿದ್ದರು. ನಂತರ ನಾನು ಮತ್ತು ಊರಿನವರು ಸೇರಿ ನನ್ನ ಗಂಡನನ್ನು ಆ್ಯಂಬುಲೆನ್ಸಲ್ಲಿ ಕರೆದುಕೊಂಡು ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಹೋದೆವು. ಅಲ್ಲಿ ವೈದ್ಯರು ನನ್ನ ಗಂಡನಿಗೆ ಚಿಕಿತ್ಸೆ ಕೊಡುತ್ತಿದ್ದ ಸಮಯದಲ್ಲಿ ಬಾಳೆಹೊನ್ನೂರು ಪೊಲೀಸರು ಸದರಿ ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಘಟನೆಯ ಬಗ್ಗೆ ತಿಳಿಸಿ ನನ್ನ ಅಣ್ಣನಾದ ಆರೋಪಿಯ ವಿರುದ್ಧ ಕ್ರಮ ಜರುಗಿಸುವಂತೆ ದೂರನ್ನು ಕೊಟ್ಟೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ.

**5.** ಸಾಕ್ಷಿಯು ಹೇಳಿಕೆಯ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

6. ನಂತರ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯ ವೈದ್ಯರು ಅಲ್ಲಿ ನನ್ನ ಗಂಡನಿಗೆ ಹೆಚ್ಚಿನ ಚಿಕಿತ್ಸೆ ಸಾಧ್ಯವಿಲ್ಲವೆಂದು ಹೇಳಿ ಆತನನ್ನು ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದರು. ನಂತರ ಅದೇ ದಿನ ಊರಿನವರು ಮತ್ತು ನನ್ನ ಸಂಬಂಧಿಕರು ನನ್ನ ಗಂಡನನ್ನು ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲಿಸಿದರು. ಅಲ್ಲಿಗೆ ಹೋದ ಕಾಲು ಗಂಟೆಯ ಒಳಗೆ ನನ್ನ ಗಂಡ ಮೃತಪಟ್ಟರು. ಆ ವಿಚಾರವನ್ನು ನನ್ನ ಸಂಬಂಧಿಕರು ಮತ್ತು ಊರಿನವರು ನನಗೆ ಫೋನ್ ಮಾಡಿ ತಿಳಿಸಿದರು.

7. ನನ್ನ ಅಣ್ಣ ಕುಡಿದು ಬಂದು ಕೆಲಸಕ್ಕೆ ಹೋಗದೇ ಮನೆಯಲ್ಲಿಯೇ ಊಟ ಮಾಡಿಕೊಂಡು ಇರುತ್ತಿದ್ದನು, ಆ ಕಾರಣಕ್ಕೆ ನನ್ನ ಗಂಡ ಆರೋಪಿಗೆ ಬೈದಿದ್ದನು. ಆಗ ಆರೋಪಿ ನಾನು ನನ್ನ ತಂಗಿಯ ಮನೆಯಲ್ಲಿ ಇದ್ದೇನೆ, ನೀನು ಯಾರು ಹೇಳುವುದಕ್ಕೆ ಎಂದು ನನ್ನ ಗಂಡನ ಮೇಲೆ ಗಲಾಟೆ ಮಾಡಿದ್ದನು. ಅದೇ ವಿಚಾರಕ್ಕೆ ನನ್ನ ಗಂಡನನ್ನು ಆರೋಪಿ ಗುದ್ದಲಿಯಿಂದ ಕಡಿದು ಕೊಲೆ ಮಾಡಿದ್ದಾನೆ.

8. ನಂತರ ದಿನಾಂಕ 11.03.2023 ರಂದು ಬೆಳಿಗ್ಗೆ 8.00 ಗಂಟೆಗೆ ಬಾಳೆಹೊನ್ನೂರು ಪೊಲೀಸರು ಸೀಕೆ ಮುದುಗುಣೆಯಲ್ಲಿರುವ ನಮ್ಮ ಮನೆಯ ಹತ್ತಿರ ಬಂದಿದ್ದರು. ಆಗ ನಾನು ಅವರನ್ನು ಮೇಲೆ ಹೇಳಿದಂತೆ ಆರೋಪಿ ನನ್ನ ಗಂಡನಿಗೆ ಗುದ್ದಲಿಯಿಂದ ಕಡಿದಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿದೆನು. ಆಗ ಚಾಸಾ.7 ಮತ್ತು ಚಾಸಾ.8 ರವರು ಹಾಜರಿದ್ದರು. ಸದರಿ ಸ್ಥಳದಲ್ಲಿ ಪೊಲೀಸರು ಬೆಳಿಗ್ಗೆ 8.00 ಗಂಟೆಯಿಂದ 9.30 ಗಂಟೆಯವರೆಗೆ ಪಂಚನಾಮೆಯನ್ನು ಬರೆದುಕೊಂಡರು. ಸದರಿ ಪಂಚನಾಮೆಯ ಕಾಲಕ್ಕೆ ಕೃತ್ಯ ನಡೆದ ಸ್ಥಳದಲ್ಲಿ ಟಾರ್ ರಸ್ತೆಯ ಮೇಲೆ ಬಿದ್ದಿದ್ದ ರಕ್ತದ ಕಲೆಯನ್ನು ಪೊಲೀಸರು ಸಂಗ್ರಹಿಸಿಕೊಂಡರು ಮತ್ತು ಸ್ಥಳದಲ್ಲಿ ಬಿದ್ದಿದ್ದ ಒಂದು ಮರದ ಹಿಡಿ ಇರುವ ಕಬ್ಬಿಣದ ಗುದ್ದಲಿಯನ್ನು ಪೊಲೀಸರಿಗೆ ಹಾಜರುಪಡಿಸಿ ಸದರಿ ಗುದ್ದಲಿಯಿಂದಲೇ ಆರೋಪಿ ನನ್ನ ಗಂಡನನ್ನು ಕೊಚ್ಚಿದ್ದಾಗಿ ತಿಳಿಸಿದೆನು. ಸದರಿ ಗುದ್ದಲಿಯನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು.

9. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.2(ಎ) ಮತ್ತು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಾನು, ಚಾಸಾ.7 ಮತ್ತು ಚಾಸಾ.8 ರವರು ಸಹಿ ಮಾಡಿರುತ್ತೇವೆ.

10. ಸದರಿ ಪಂಚನಾಮೆಯ ಕಾಲಕ್ಕೆ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ 6 ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವುಗಳನ್ನು ಪೊಲೀಸರು ಮೇಲೆ ಹೇಳಿದಂತೆ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸುವಾಗ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.3 ರಿಂದ ನಿಪಿ.8 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನನ್ನೊಂದಿಗೆ, ಚಾಸಾ.7, ಚಾಸಾ.8 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ.

11. ನಿಪಿ.2 ಪಂಚನಾಮೆಯ ಕಾಲಕ್ಕೆ ಪೊಲೀಸರು ಸಂಗ್ರಹಿಸಿಕೊಂಡ ರಕ್ತದ ಪುಡಿ ಮತ್ತು ನಾನು ಹಾಜರುಪಡಿಸಿದ ಕಬ್ಬಿಣದ ಗುದ್ದಲಿಯನ್ನು ನೋಡಿದರೆ ಗುರುತಿಸುತ್ತೇನೆ. ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಇದ್ದ ಪುಡಿಯನ್ನು ಸಾಕ್ಷಿಯು ನೋಡಿ ಆ ದಿನ ಪೊಲೀಸರು ಸಂಗ್ರಹಿಸಿದ ರಕ್ತದ ಕಲೆ ಇರುವ ಟಾರು ರಸ್ತೆಯ ಪುಡಿ ಅದೇ ಎಂದು ನುಡಿದಿರುತ್ತಾರೆ. ಸದರಿ

ಪುಡಿಯನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಮರದ ಹಿಡಿ ಇರುವ ಕಬ್ಬಿಣದ ಗುದ್ದಲಿಯನ್ನು ನೋಡಿ ಆರೋಪಿ ನನ್ನ ಗಂಡನನ್ನು ಕಡಿಯಲು ಉಪಯೋಗಿಸಿದ್ದ ಗುದ್ದಲಿ ಅದೇ ಎಂದು ನುಡಿದ ಮೇರೆಗೆ ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.

(ಈ ದಿನ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು, ಅವುಗಳನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

12. ಸಾಕ್ಷಿಗೆ ಒಂಭತ್ತು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ನನ್ನ ಗಂಡನ ಶವ ಮತ್ತು ಆತನ ಕುತ್ತಿಗೆ ಮತ್ತು ಮುಖದಲ್ಲಿ ಆದ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.9 ರಿಂದ ನಿಪಿ.17 ಎಂದು ಗುರುತಿಸಲಾಯಿತು.

13. ಮಹಜರ್ ಮುಗಿದ ಬಳಿಕ ನಾನು ನನ್ನ ಗಂಡನನ್ನು ನೋಡಲು ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಹೋಗಿ ಅಲ್ಲಿ ಆತನ ಶವವನ್ನು ನೋಡಿದೆನು. ದಿನಾಂಕ 11.03.2023 ರಂದು ರಾತ್ರಿ ನನ್ನ ಗಂಡನ ಶವವನ್ನು ವೈದ್ಯರು ಮತ್ತು ಪೊಲೀಸರು ನಮಗೆ ಹಸ್ತಾಂತರಿಸಿದರು. ನಂತರ ನಾವು ಅದನ್ನು ಸೀಕೆ ಮುದುಗುಣಿಯಲ್ಲಿರುವ ನಮ್ಮ ಮನೆಗೆ ತಂದು ಅದೇ ದಿನ ಅಂತ್ಯ ಸಂಸ್ಕಾರವನ್ನು ಮಾಡಿದೆವು.

14. ಅದಾದ 15 ದಿನಗಳ ಬಳಿಕ ಪೊಲೀಸರು ನನ್ನನ್ನು ನ.ರಾ.ಪುರ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಜಡ್ಜ್ ಏನಾಯಿತು ಕೇಳಿದರು. ಆಗ ನಾನು ಅವರಿಗೆ ಆರೋಪಿ ನನ್ನ ಗಂಡನನ್ನು ಗುದ್ದಲಿಯಿಂದ ಕೊಚ್ಚಿ ಕೊಲೆ ಮಾಡಿದ್ದಾಗಿ ತಿಳಿಸಿದೆನು. ಅದನ್ನು ಅವರು ಟೈಪ್ ಮಾಡಿಕೊಂಡು ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು.

15. ಮಾರನೇ ದಿನ ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಹೋಗಿ ಪೊಲೀಸರು ಮಹಜರ್ ಮಾಡಿಕೊಂಡ ಬಗ್ಗೆ ಮತ್ತು ಆರೋಪಿ ನನ್ನ ಗಂಡನನ್ನು ಗುದ್ದಲಿಯಿಂದ ಕೊಚ್ಚಿ ಕೊಲೆ ಮಾಡಿದ್ದ ಬಗ್ಗೆ ಹೇಳಿಕೆ ನೀಡಿದ್ದೇನೆ. ಆರೋಪಿ ನನಗೆ ಗಂಡ ಇಲ್ಲದಂತೆ ಮತ್ತು ನನ್ನ ಮಕ್ಕಳಿಗೆ ತಂದೆ ಇಲ್ಲದಂತೆ ಮಾಡಿದ್ದಾನೆ ಹಾಗಾಗಿ ಆತ ಜೈಲಿನಲ್ಲಿಯೇ ಇರಬೇಕು.

**(**ಪಾಟೀ ಸವಾಲು**:** ಆರೋಪಿತರ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಚಾಸಾ**.5** ಮತ್ತು ಚಾಸಾ**.6** ರವರ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಅರ್ಜಿ ಸಲ್ಲಿಸಿದ್ದು ಅಭಿಯೋಜಕರು ಸದರಿ ಅರ್ಜಿಗೆ ತಕರಾರು ಸಲ್ಲಿಸಲು ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು**.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ